ದೊರೆತ ಜನಪ್ರಿಯತೆ ಬೆರಗು ಹುಟ್ಟಿಸಿದೆ. ಈಗ ಒಂದೇ ಮನೆಯಲ್ಲಿ ನನ್ನನ್ನು ಮೀರಾ ಆಗಿಯೂ, ಎದೆ ತುಂಬಿ ಹಾಡುವೆನು ಕಾರ್ಯಕ್ರಮದ ಅಂಕಿತಾ ಆಗಿಯೂ ಗುರ್ತಿಸಿ ಅಭಿಮಾನದಿಂದ ಮಾತಾಡಿಸುವವರಿದ್ದಾರೆ. ಈಗ ನನ್ನ ಮೊದಲ ಸಿನಿಮಾ 'ಅಬ ಜಬ ದಬ'ದಲ್ಲಿ ಅವಕಾಶ ಸಿಕ್ಕಿದ್ದೂ ಈ ಎರಡು ಕಾರ್ಯಕ್ರಮಗಳಿಂದಲೇ' ಎಂದು ಒಂದರಿಂದ ಇನ್ನೊಂದು ಖೋ ಕೊಟ್ಟುಕೊಂಡು ಮುಂದೆ ಸಾಗುತ್ತಿರುವುದನ್ನು ಖುಷಿಯಿಂದಲೇ ಅವರು ಹಂಚಿಕೊಳ್ಳುತ್ತಾರೆ.

ಮಯೂರ ರಾಘವೇಂದ್ರ ನಿರ್ದೇಶನದ 'ಅಬ ಜಬ ದಬ' ಸಿನಿಮಾದಲ್ಲಿ ಅಂಕಿತಾ ಪೃಥ್ವಿ ಅಂಬರ್ ಜೊತೆಗೆ ನಾಯಕಿಯಾಗಿ ತೆರೆ ಹಂಚಿಕೊಳ್ಳುತ್ತಿದ್ದಾರೆ. ಇದರಲ್ಲಿಯೂ ಅವರಿಗೆ ಸಿಕ್ಕಿದ್ದು ಗಾಯಕಿಯ ಪಾತ್ರವೇ!

'ಚಿತ್ರದ ಕಥೆ ಚೆನ್ನಾಗಿತ್ತು. 90ರ ದಶಕದಲ್ಲಿ ಹುಟ್ಟಿದವರಿಗೆಲ್ಲ ತುಂಬ ಇಷ್ಟವಾಗುವ ಕಥೆ ಇದು. ಜೊತೆಗೆ ಇದರಲ್ಲಿ ಶಂಕರ್‌ನಾಗ್ ಅವರೂ ಕಾಣಿಸಿಕೊಳ್ಳುತ್ತಾರೆ ಎಂದೂ ಹೇಳಿದ್ದಾರೆ. ಜೊತೆಗೆ ಈ ಚಿತ್ರದ ನನ್ನ ಪಾತ್ರಕ್ಕೂ ಎಸ್‌ಪಿಬಿ ಸರ್‌ಗೂ ಒಂದು ಲಿಂಕ್ ಕೂಡ ಇದೆ. ಇಂಥ ಸಿನಿಮಾ ನನ್ನ ಮೊದಲ ಸಿನಿಮಾ ಆಗುವುದಾದರೆ ನಿರಾಕರಿಸಲು ಕಾರಣವೇ ಇಲ್ಲ ಅನಿಸಿತು. ಹಾಗಾಗಿ ಒಪ್ಪಿಕೊಂಡೆ' ಎನ್ನುತ್ತಾರೆ ಅಂಕಿತಾ.

ತಾನು ನಟಿಸುತ್ತಿರುವ ಪಾತ್ರಕ್ಕಾಗಿ ಪ್ರತ್ಯೇಕ ಸಮಯ ಮೀಸಲಿಟ್ಟು ಸಿದ್ಧಳಾಗುವುದು ಅಂಕಿತಾ ಜಾಯಮಾನ ಅಲ್ಲ. 'ನಾನು ನನ್ನ ಬದುಕಿನಲ್ಲಿ ದಿನನಿತ್ಯ ಎದುರಾಗುವ ಸನ್ನಿವೇಶಗಳಲ್ಲಿಯೇ ನನ್ನ ಬದಲು ಈ ಸಂದರ್ಭದಲ್ಲಿ ಆ ಪಾತ್ರ ಇದ್ದಿದ್ದರೆ ಹೇಗೆ ಪ್ರತಿಕ್ರಿಯಿಸುತ್ತಿದ್ದಳು ಎಂದು ಯೋಚಿಸುತ್ತೇನೆ. ಹಾಗೆ ಆದಷ್ಟೂಸಹಜವಾಗಿಯೇ ಆ ಪಾತ್ರವನ್ನು ನನ್ನದಾಗಿಸಿಕೊಳ್ಳುತ್ತೇನೆ. ನಟನೆ ಎಂದರೆ ಅದು ಎಷ್ಟು ಸಾಧ್ಯವೋ ಅಷ್ಟು ಸಹಜವಾಗಿರಬೇಕು ಎಂಬುದು ನನ್ನ ನಂಬಿಕೆ' ಎಂದು ತಮ್ಮ ನಟನಾಮೀಮಾಂಸೆಯನ್ನು ವಿವರಿಸುವ ಅವರಿಗೆ ಆದಷ್ಟೂ ವೈವಿಧ್ಯಮಯ ಪಾತ್ರಗಳಲ್ಲಿ ನಟಿಸಬೇಕು ಎಂಬ ಹಂಬಲ ಇದೆ.

'ಇನ್ನು ನಾಲ್ಕೈದು ವರ್ಷಗಳಲ್ಲಿ ನಾನು ಎಲ್ಲಿರುತ್ತೇನೋ ನನಗೆ ಗೊತ್ತಿಲ್ಲ. ಆದರೆ ನನ್ನ ಪಾಲಿಗೆ ಬರುವ ಯಾವ ಒಳ್ಳೆಯ ಅವಕಾಶವನ್ನೂ ಬಿಟ್ಟುಕೊಡಲಾರೆ. ನಾಯಕಿ ಪಾತ್ರವೇ ಬೇಕು ಎಂದೆಲ್ಲ ಯೋಚಿಸದೇ ಒಂದು ಒಳ್ಳೆಯ ಪಾತ್ರ, ಒಂದು ಒಳ್ಳೆಯ ಕಥೆ ಸಿಕ್ಕರೆ ಕಣ್ಣುಮುಚ್ಚಿಕೊಂಡು ನಟಿಸುತ್ತೇನೆ. ಆ ಪಾತ್ರಗಳನ್ನು ನನ್ನನ್ನು ಎಲ್ಲಿಗೆ ಕೊಂಡೊಯ್ಯುತ್ತವೆಯೋ ಅಲ್ಲಿಗೆ ಹೋಗುತ್ತೇನೆ' ಎಂದು ಮತ್ತದೇ ನಿಷ್ಕಳಂಕ ನಗು ಚೆಲ್ಲುವ ಅಂಕಿತಾ ತಮ್ಮ ಮೊದಲ ಸಿನಿಮಾ 'ಅಬ ಜಬ ದಬ'ದಿಂದ ಮತ್ತಷ್ಟು ಅವಕಾಶಗಳು ಸಿಗುತ್ತದೆ ಎಂಬ ಭರವಸೆಯಲ್ಲಿ ಇದ್ದಾರೆ. ■

## ಟೈಗರ್ ಟಾಕೀಸ್‌ನಲ್ಲಿ
# ಲಂಕಾಸುರ




ಖಳನಾಗಿಯೂ ನಾಯಕನಾಗಿಯೂ ಕನ್ನಡ ಚಿತ್ರರಂಗದಲ್ಲಿ ಮಿಂಚಿದ್ದ ಟೈಗರ್ ಪ್ರಭಾಕರ್ ಮಗ ವಿನೋದ್ ಪ್ರಭಾಕರ್ ನಾಯಕನಟನಾಗಿ ಚಿತ್ರರಂಗದಲ್ಲಿ ನೆಲೆ ಕಂಡುಕೊಳ್ಳಲು ಸಾಕಷ್ಟು ಹೆಣಗುತ್ತಿದ್ದಾರೆ. ಆಕರ್ಷಕ ಮೈಕಟ್ಟು, ಸಾಹಸದ ಹೊಸ ಪಟ್ಟುಗಳೆಲ್ಲ ಇದ್ದರೂ ಅವರು ಮಾಸ್ ಹೀರೊ ಆಗಿ ನೆಲೆಯೂರಲು ಸಾಧ್ಯವಾಗಿಲ್ಲ. ಆದರೆ ಆ ಪ್ರಯತ್ನವನ್ನಂತೂ ಅವರು ಬಿಟ್ಟಿಲ್ಲ. ಈಗ ಅದೇ ಪ್ರಯತ್ನದ ವಿಸ್ತರಣೆಯಾಗಿ ನಿರ್ಮಾಣ ಕಾರ್ಯಕ್ಕೂ ಮುಂದಾಗಿದ್ದಾರೆ.

'ಟೈಗರ್ ಟಾಕೀಸ್' ಎಂಬ ಹೆಸರಿನ ನಿರ್ಮಾಣ ಸಂಸ್ಥೆಯನ್ನು ಅವರು ಪ್ರಾರಂಭಿಸಿದ್ದು, ತಾವೇ ನಾಯಕನಾಗಿ ನಟಿಸುತ್ತಿರುವ 'ಲಂಕಾಸುರ' ಸಿನಿಮಾವನ್ನು ಆ ಸಂಸ್ಥೆಯ ಅಡಿಯಲ್ಲಿಯೇ ನಿರ್ಮಿಸುತ್ತಿದ್ದಾರೆ.

ಪಕ್ಕಾ ಮಾಸ್ ಆ್ಯಕ್ಷನ್ ಕಥೆಯುಳ್ಳ 'ಲಂಕಾಸುರ'ದಲ್ಲಿ ವಿನೋದ್ ಪ್ರಭಾಕರ್ ಜೊತೆಗೆ ಯೋಗಿ ಕೂಡ ನಟಿಸುತ್ತಿರುವುದು ವಿಶೇಷ. ಇವರಿಬ್ಬರೂ ಇದೇ ಮೊದಲ ಬಾರಿಗೆ ಒಟ್ಟಿಗೇ ತೆರೆಯ ಮೇಲೆ ನಟಿಸುತ್ತಿದ್ದಾರೆ. ದೇವರಾಜ್ ಮತ್ತು ರವಿಶಂಕರ್ ಅವರೂ ಮುಖ್ಯಭೂಮಿಕೆಯಲ್ಲಿದ್ದಾರೆ.

ಪ್ರಮೋದ್‌ಕುಮಾರ್ ಡಿ.ಎಸ್. ಎಂಬವರು ಆ್ಯಕ್ಷನ್ ಕಟ್ ಹೇಳುತ್ತಿರುವ ಈ ಸಿನಿಮಾಕ್ಕೆ ವಿಜೇತ್ ಕೃಷ್ಣ ಸಂಗೀತ ನೀಡಿದ್ದಾರೆ. ಸುಜ್ಞಾನ್ ಛಾಯಾಗ್ರಹಣ, ದೀಪು ಎಸ್. ಕುಮಾರ್ ಸಂಕಲನ ಚಿತ್ರಕ್ಕಿದೆ. ■

# ಅಕಟಕಟ! ಇದು ಸಿನಿಮಾ!

ರಂಗಭೂಮಿಯ ಕಸುವನ್ನೂ, ಛಾಯಾಗ್ರಹಣದ ಹಸಿವನ್ನೂ ತಮ್ಮೊಳಗೆ ಇಟ್ಟುಕೊಂಡೇ ಚಿತ್ರರಂಗಕ್ಕೆ ಅಡಿಯಿಟ್ಟು ನಾಗರಾಜ ಸೋಮಯಾಜಿ 'ದಿ ಬೆಸ್ಟ್ ಆ್ಯಕ್ಟರ್' ಎಂಬ ಕಿರುಚಿತ್ರವನ್ನು ನಿರ್ದೇಶಿಸಿದ್ದರು. ಸಿನಿಮಾ ನಿರ್ದೇಶನ ತಮ್ಮ ಕನಸು ಎಂಬುದರ ಸೂಚನೆಯನ್ನು ಅಲ್ಲಿಯೇ ಕೊಟ್ಟಿದ್ದರೂ ಅವರು ನಂತರ ಕೈ ಹಾಕಿದ್ದು ನಿರ್ಮಾಣದ ಸಾಹಸಕ್ಕೆ. ಅರವಿಂದ್ ಕುಪ್ಲೀಕರ್ ನಿರ್ದೇಶನದ 'ಪುಕ್ಸಟ್ಟೆ ಲೈಫು', ನಾಗರಾಜ ನಿರ್ಮಾಣ ಮಾಡಿದ ಸಿನಿಮಾ. ಚಿತ್ರಮಂದಿರಗಳಲ್ಲಿ ತೆರೆಕಂಡು, ಈಗ 'ಜಿ5' ಒಟಿಟಿ ವೇದಿಕೆಯಲ್ಲಿ ಆ ಸಿನಿಮಾ ಲಭ್ಯವಿದೆ.

ನಾಗರಾಜ ಈಗ ಮತ್ತೆ ತಮ್ಮ ಇಷ್ಟದ ನಿರ್ದೇಶಕನ ಟೋಪಿಯನ್ನು ಧರಿಸಲು ಸಿದ್ಧರಾಗಿದ್ದಾರೆ. 'ಅಕಟಕಟ' ಎಂಬ ಹೆಸರಿನ ಸಿನಿಮಾ ಪೋಸ್ಟರ್ ಅನ್ನು ಇತ್ತೀಚೆಗೆ ಬಿಡುಗಡೆ ಮಾಡಿರುವ ಅವರು ಈ ಸಿನಿಮಾವನ್ನು ತಾವೇ ನಿರ್ದೇಶನ ಮಾಡುತ್ತಿರುವುದಾಗಿ ಹೇಳಿಕೊಂಡಿದ್ದಾರೆ. ಹೆಸರಿನಷ್ಟೇ ವಿಭಿನ್ನವೂ, ಸತ್ವಯುತವೂ ಆದ ಸಿನಿಮಾವನ್ನು ಕೊಡುತ್ತೇವೆ ಎಂಬ ಭರವಸೆಯನ್ನೂ ಅವರು ಕೊಟ್ಟಿದ್ದಾರೆ.



ಈ ಸಿನಿಮಾದ ಸ್ಕ್ರಿಪ್ಟ್ ಕೆಲಸ ನಡೆಯುತ್ತಿದ್ದು, ಸಂಧ್ಯಾರಾಣಿ, ಭಾಸ್ಕರ್ ಬಂಗೇರ ಕೂಡ ಜೊತೆಯಾಗಿದ್ದಾರಂತೆ. ಕಥೆ, ಪಾತ್ರಗಳ ಪೋಷಣೆಗಾಗಿಯೇ ನಲ್ವತ್ತು ದಿನಗಳ ಕಾಲ ಮೀಸಲಿಡಲು ಚಿತ್ರತಂಡ ತೀರ್ಮಾನಿಸಿದೆಯಂತೆ.



ಚಿತ್ರದ ಪಾತ್ರವರ್ಗದ ಮಾಹಿತಿಯನ್ನು ಚಿತ್ರತಂಡ ಜಾಹೀರು ಮಾಡಿಲ್ಲ. ಮೊದಲ ನೋಟದ ಪೋಸ್ಟರ್ ಅಂತೂ ಕುತೂಹಲಕಾರಿಯಾಗಿದೆ. ಆ ಕುತೂಹಲವನ್ನು ತೆರೆಯ ಮೇಲೂ ಉಳಿಸಿಕೊಳ್ಳುವ ಹಟದಲ್ಲಿ ನಾಗರಾಜ್ ಸೋಮಯಾಜಿ ನಿರ್ದೇಶನದ ಸವಾಲಿಗೆ ಸಜ್ಜಾಗುತ್ತಿದ್ದಾರೆ. ■